ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಆ ಸಮಿತಿಯವರು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅದರ ಜೊತೆಗೆ ಇನ್ನು ಮಾಹಿತಿಗಳನ್ನು ನಾವು ತರಿಸಬೇಕಾಗುತ್ತದೆ. ಆ ಮಾಹಿತಿಯನ್ನು ತರಿಸಿ ಸರ್ಕಾರ ಪರಿಶೀಲನೆ ಮಾಡುತ್ತದೆ. ಮಾನ್ಯ ಸದಸ್ಯರು ಏನೇನು ಸೂಚನೆಗಳನ್ನು ಕೊಟ್ಟಿದ್ದಾರೆ ಆ ಎಲ್ಲಾ ಸೂಚನೆಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

ಡಾ।। ವಿ.ಎಸ್. ಆಚಾರ್ಯ.—ವಾನ್ಯ ವಾಸುದೇವರಾಯರ ಸಮಿತಿಯ ವರದಿಯು ಧೂಳು ತುಂಬಿರಬಹುದು. ಆದರೆ ಅದರ ಬಗ್ಗೆ ಸರ್ಕಾರ ಇನ್ನು ಪರಿಶೀಲನೆ ಮಾಡುವ ಹಂತದಲ್ಲಿದೆ. ಆದರೆ ಉಡುಪಿಯನ್ನು ತಾವು ಜಿಲ್ಲೆಯೆನ್ನಾಗಿ ಮಾಡಿದರೆ ಅದಕ್ಕೆ ಸೇರುವಂಥ ಬ್ರಹ್ಮಾವರ ಮತ್ತು ಮೂಡಬಿದ್ರೆ ಹಾಗೂ ಹೆಬ್ಬರಿಗಳನ್ನು ತಾಲ್ಲೂಕುಗಳ ಆಗಿ ವಿಂಗಡಣೆ ಮಾಡುತ್ತೀರಾ ? ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದು ಖಚಿತವಾಗಿ ತಿಳಿಸಬೇಕು. ಈಗ ತಾವು ನವ ಚಂಡಿಗಡ ಮತ್ತು ಬಾಗಲಕೋಟೆಯನ್ನು ತಾಲ್ಲೂಕುಗಳನ್ನಾಗಿ ಘೋಷಣೆ ಮಾಡುತ್ತಿದ್ದೀರಿ. ಆದರ ಜೊತೆಯಲ್ಲಿ ಇದನ್ನು ಕೂಡ ಘೋಷಣೆ ಮಾಡುತ್ತೀರಾ ?

ಶ್ರೀ ವಿ.ಎಲ್. ಪಾಟೀಲ್.—ಪರಿಶೀಲನೆ ಮಾಡುತ್ತೇನೆ. ಖಚಿತವಾಗಿ ಮಾಡುತ್ತೇನೆಂದು ಹೇಳುವುದಕ್ಕಾಗುವುಲ್ಲ.

ಶಿಕಾರಿಪುರ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಕೆರೆಗಳು ಒಡೆದಿರುವ ವಿಚಾರ

೪೨೦ (೨೩೧) ಶ್ರೀ ಬಿ. ಎಸ್. ಯಡಿಯೂರಪ್ಪ .—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

(ಅ) ಶಿಕಾರಿಪುರ ತಾಲೂಕಿನ ತಾಳಗುಂದ, ಉಡುಗುಣಿ ಹೋಬಳಿ ಗ್ರಾಮಗಳಲ್ಲಿ ಅತಿವೃಷ್ಟಿಯಾಗಿ ಕೆರೆಗಳು ಒಡೆದು ಸಂಪೂರ್ಣ ಫಸಲು ನಾಶವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ಪರಿಹಾರ ಕೊಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

(ಅ) ಉಡುಗಣಿ ಹೋಬಳಿಯಲ್ಲಿ ಒಂದು ಗ್ರಾಮ ಮತ್ತು ತಾಳಗುಂದ ಹೋಬಳಿಯಲ್ಲಿ ೧೩ ಗ್ರಾಮಗಳಲ್ಲಿ ೯೫೦ ಎಕರೆ ವಿಸ್ತೀರ್ಣದ ಬೆಳೆ ನಾಶವಾಗಿರುತ್ತದೆ. ರೂ. ೩,೯೨,೫೫೫.೦೦ ನಷ್ಟ ಆಗಿದೆಯೆಂದು ಅಂದಾಜು ಮಾಡಲಾಗಿದೆ.

(ಆ) ತೊಂದರೆಗೊಳಗಾದ ಜನರಿಗೆ ಕೃಷಿಗೆ ಬೇಕಾದ ಬೀಜ, ಗೊಬ್ಬರ ಒದಗಿಸಲು ಕೇಂದ್ರ ಸರ್ಕಾರದ ನೆರವು ಕೋರಲಾಗಿದೆ.

(ಶ್ರೀ ಬಿ. ಎಸ್. ಯಡಿಯೂರಪ್ಪನವರ ಬದಲು ಶ್ರೀ ಧನಂಜಯ ಕುಮಾರ್‌ರವರಿಗೆ ಅನುಮತಿ ಕೊಡಲಾಯಿತು.)

ಶ್ರೀ ವಿ. ಧನಂಜಯ ಕುಮಾರ್.—ತೊಂದರೆಗೆ ಒಳಗಾದ ಜನರಿಗೆ ಕೃಷಿಗೆ ಬೇಕಾದ ಬೀಜ ಗೊಬ್ಬರ ಒದಗಿಸಲು ಕೇಂದ್ರ ಸರ್ಕಾರದ ನೆರವನ್ನು ಕೋರಲಾಗಿದೆ ಎಂದು ಹೇಳಿದ್ದಾರೆ. ಯಾವಾಗ ಇದರ ಅಂದಾಜಾಗಿದ್ದು? ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದು ಯಾವಾಗ? ನಮಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಕೇಂದ್ರ ಸರ್ಕಾರದಿಂದ ಬರುವಂತಹ ನೆರವು ೨ ವರ್ಷದ ನಂತರ ಬರಬಹುದು. ಆದರೆ ಸಧ್ಯಕ್ಕೆ ಆ ರೈತರು ಬೆಳೆಮಾಡುವುದಕ್ಕೆ ಸಹಾಯವನ್ನು ಮಾಡುವ ಸಲುವಾಗಿ, ರಾಜ್ಯ ಸರಕಾರ ಅವರಿಗೆ ಸಹಾಯವನ್ನು ಒದಗಿಸುವುದಕ್ಕೆ ಏನಾದರೂ ಕ್ರಮ ಜರುಗಿಸುತ್ತದೆಯೇ?

ಶ್ರೀ ವಿ. ಎಲ್. ಪಾಟೀಲ್.—ರಾಜ್ಯ ಸರ್ಕಾರಕ್ಕೆ ಆ ರೀತಿ ಕೊಡುವಂತಹ ವ್ಯವಸ್ಥೆ ಇಲ್ಲ. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಬರೆದಿದ್ದೇವೆ. ಇದಕ್ಕಾಗಿ ಪ್ರತಿ ಕುಟುಂಬಕ್ಕೆ ೫೦೦ ರೂಪಾಯಿಗಳಂತೆ ಕೊಡಬೇಕೆಂದು ತಿಳಿಸಿದ್ದೇವೆ. ಕೇಂದ್ರ ಸರ್ಕಾರದಿಂದ ಒಂದು ಟೀಮ್ ಕೂಡ

ಬಂದು ಅದು ಎಲ್ಲಾಕಡೆ ಸಮೀಕ್ಷೆ ಮಾಡಿ, ನೆರೆಹಾವಳಿಯಿಂದ ಆಗಿರುವಂತಹ ನಷ್ಟವನ್ನು ನೋಡಿ ಕೊಂಡು, ಅವರ ಜೊತೆಯಲ್ಲಿ ಈ ಬಗ್ಗೆ ಸಂಬಂಧವಾದ ವರದಿಯನ್ನೂ ತೆಗೆದುಕೊಂಡು ಹೋಗಿ ದ್ದಾರೆ. ಕೇಂದ್ರದಿಂದ ನೆರವು ಬೇಗನೆ ಬರಬಹುದೆಂದು ಆಶೆ ಮಾಡಿದ್ದೇವೆ.

ರೋಣ ತಾಲ್ಲೂಕಿನಲ್ಲಿ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ

೪೨೧ (೨೨೭) ಶ್ರೀ ಬಿ. ಆರ್. ಯಾವಗಲ್ (ನರಗುಂದ).—ಮಾನ್ಯ ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ನರಗುಂದ ಹಾಗೂ ರೋಣ ತಾಲ್ಲೂಕುಗಳ ಹಳ್ಳಿಗಳಿಗೆ ಆಗಾಗ ವಿದ್ಯುತ್ ಪೂರೈಕೆಯಲ್ಲಿ ಅಡಚಣೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ಸರ್ಕಾರದವರು ಕೈಕೊಂಡ ಕ್ರಮವೇನು?

ಶ್ರೀ ಜೆ. ಎಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ಬಂದಿದೆ.

(ಆ) ನರಗುಂದ ಮಾಸ್ಟರ್ ಯುನಿಟ್ಟು ಸಬ್‌ಸ್ಟೇಷನ್ನಲ್ಲಿ ದಿನಾಂಕ ೧೭ನೇ ಮೇ ೧೯೮೩ರಂದು ಒಂದು ಪವರ್ ಟ್ರಾನ್ಸ್‌ಫಾರ್ಮರ್ ಮತ್ತು ಕಂಟ್ರೋಲ್ ಕ್ಯೂಬೆಕಲ್‌ಗಳು ಸುಟ್ಟು ಹೋದುವು. ಅವುಗಳನ್ನು ಸರಿಪಡಿಸಿ ವಿದ್ಯುತ್ ಪೂರೈಕೆಯನ್ನು ದಿನಾಂಕ ೩ನೇ ಆಗಸ್ಟ್ ೧೯೮೩ರಿಂದ ಯಥಾ ಸ್ಥಿತಿಗೆ ತರಲಾಗಿದೆ.

ಶ್ರೀ ಬಿ.ಆರ್. ಯಾವಗಲ್.—ಈ ರೀತಿಯಾಗಿ ತೊಂದರೆಯಾಗಲು ಎರಡು ಕಾರಣಗಳಿವೆ. ಅಲ್ಲಿ ಪದಪುಸೆಟ್ಟುಗಳು ಹೊಳೆಯ ದಂಡೆಯಲ್ಲಿವೆ. ಮತ್ತು ಅಲ್ಲಿಗೆ ಪ್ರತ್ಯೇಕವಾದ ಸಬ್-ಡಿವಿಜನ್ ಅವಶ್ಯಕತೆ ಇದೆ. ಅದನ್ನು ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವೇ ? ಮತ್ತೊಂದು ಆ ಭಾಗದ ಎಕ್ಸಿಕ್ಯೂಟೀವ್ ಇಂಜಿನಿಯರ್ ಏನು ಇದ್ದಾರೆ, ಅವರ ಕಛೇರಿಯಲ್ಲಿ ಬಹುತೇಕ ಸಿಬ್ಬಂದಿಗಳು ಜಾಗ ಖಾಲಿ ಇರುವುದರಿಂದ, ಅಲ್ಲಿ ಕೆಲಸಗಾರರ ತೊಂದರೆಯಿಂದಾಗಿ, ಈ ರೀತಿಯಾಗಿದ್ದನ್ನು ೫ ತಿಂಗಳ ನಂತರ ರಿಪೇರಿ ಮಾಡಿದ್ದಾರೆ. ಇದರಿಂದ ಜನರಿಗೆ ಬಹಳ ತೊಂದರೆಯಾಗಿದೆ ಇದನ್ನು ಸರ್ಕಾರದವರು ಸರಿಪಡಿಸುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಸಚಿವರ ಪರವಾಗಿ).—ಮೇ ತಿಂಗಳಲ್ಲಿ ಆ ರೀತಿ ಆಗಿದ್ದು ನಿಜ. ಆದರೆ ಅವರಿಗೆ ವಿದ್ಯುಚ್ಛಕ್ತಿಯನ್ನು ನಿಲ್ಲಿಸಿಲ್ಲ. ದೋಣಿ ಮತ್ತು ಅಣ್ಣಿಗೇರಿ ಯಿಂದ ಈ ಭಾಗಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕಂತಹ ಕೆಲಸವನ್ನು ಮಾಡಿದ್ದೇವೆ. ಮತ್ತೆ ಸಬ್ ಸ್ಟೇಷನ್ ಹೊಸದಾಗಿ ಪ್ರಾರಂಭ ಮಾಡುವ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಸಬ್ ಸ್ಟೇಷನ್ ತೆಗೆಯುವುದಕ್ಕೆ ಕೆಲವು ನಾರ್ಮ್ಸ್ ಇವೆ. ಆ ನಾರ್ಮ್ಸ್ ಒಳಗಡೆ ಮಾನ್ಯ ಸದಸ್ಯರು ಹೇಳತಕ್ಕಂತಹ ಭಾಗ ಬಂದರೆ ಸಬ್ ಸ್ಟೇಷನ್ ಸ್ಥಾಪನೆ ಮಾಡತಕ್ಕಂತಹದ್ದಕ್ಕೆ ವ್ಯವಸ್ಥೆ ಮಾಡ ಲಾಗುವುದು.

ಶ್ರೀ ಬಿ.ಆರ್. ಯಾವಗಲ್.—ಇದರ ಜೊತೆಗೆ ಎಕ್ಸಿಕ್ಯೂಟೀವ್ ಇಂಜಿನೀಯರ್ ಕಛೇರಿಯಲ್ಲಿ ಖಾಲಿ ಇರುವ ಎಲ್ಲಾ ಸಿಬ್ಬಂದಿಯನ್ನು ಕೂಡಲೇ ಒದಗಿಸಿಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಬಗ್ಗೆ ವಿಚಾರಿಸುತ್ತೇನೆ.

ಹುಕ್ಕೇರಿ-ಸಂಕೇಶ್ವರ ವಂತ್ರ್ಯ ಉಳಿದ ಹನ್ನೊಂದು ಹಳ್ಳಿಗಳಿಗೆ ನೀರು ಸರಬರಾಜು ಯೋಜನೆಯ ಮಂಜೂರಾತಿ ಬಗ್ಗೆ

೪೨೨ (೩೫೪) ಶ್ರೀ ಎಂ. ಎಸ್. ಪಾಟೀಲ್ ಮತ್ತು ಶ್ರೀ ಎ. ಬಿ. ದೇಸಾಯಿ.—ಮಾನ್ಯ ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರದ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ಸಂಕೇಶ್ವರ-ಹುಕ್ಕೇರಿ ಹಾಗೂ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಗೆ ಮಂಜೂರಾತಿ ದೊರೆತಿದೆಯೇ ?